ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE: 19/11/20

# ವಿಜಯ ಉದಯ

## ಬಳ್ಳಾರಿ ಇಬ್ಭಾಗಕ್ಕೆ ಕೊನೆಗೂ ಮನ್ನಣೆ। ವಿಜಯನಗರ ಹೊಸ ಜಿಲ್ಲೆ ಹೊಸಪೇಟೆಯೇ ಜಿಲ್ಲಾ ಕೇಂದ್ರ। ಬಳ್ಳಾರಿಯಲ್ಲಿ ತೀವ್ರ ವಿರೋಧ

ಬಳ್ಳಾರಿ/ಬೆಂಗಳೂರು: ಗಣಿನಾಡು ಬಳ್ಳಾರಿ ಜಿಲ್ಲೆಯನ್ನು ವಿಭಜಿಸಿ ವಿಜಯನಗರ ಜಿಲ್ಲೆ ರಚನೆಗೆ ಸಚಿವ ಸಂಪುಟದಲ್ಲಿ ತಾತ್ವಿಕವಾಗಿ ಒಪ್ಪಿಗೆ ದೊರೆತಿದೆ, ಹೀಗಾಗಿ ಪ್ರತ್ಯೇಕ ವಿಜಯನಗರ ಜಿಲ್ಲೆ ರಚಿಸಬೇಕೆಂಬ ಬೇಡಿಕೆಗೆ ಕೊನೆಗೂ ಮನ್ನಣೆ ಸಿಕ್ಕಿದೆ. ಇದರಿಂದ ದಶಕಗಳ ಹೋರಾಟಕ್ಕೆ ಮೊದಲ ಜಯ ಸಿಕ್ಕಂತಾಗಿದೆ. ಈ ವಿಷಯ ಹೊರಬೀಳುತ್ತಿದ್ದಂತೆ ಹೊಸಪೇಟೆಯಲ್ಲಿ ಜನ ಆನಂದಿಸಿದರೆ, ಸರ್ಕಾರದ ನಿರ್ಣಯಕ್ಕೆ ಬಳ್ಳಾರಿಯಲ್ಲಿ ವಿರೋಧ ವ್ಯಕ್ತವಾಗಿದೆ.

ಪ್ರತ್ಯೇಕ ಜಿಲ್ಲೆ ರಚನೆಗೆ ಮೊದಲಿನಿಂದಲೂ ವಿರೋಧ ವ್ಯಕ್ತಪಡಿಸಿದ್ದ ಬಳ್ಳಾರಿ ನಗರ ಶಾಸಕ ಜಿ. ಸೋಮಶೇಖರ ರೆಡ್ಡಿ ಅಖಂಡವಾಗಿರುವ ಬಳ್ಳಾರಿ ಜಿಲ್ಲೆಯನ್ನು ವಿಭಜಿಸಿದರೆ ಮುಂದಿನ ದಿನಗಳಲ್ಲಿ ಜನರೇ ಬಿಜೆಪಿಗೆ ತಕ್ಕ ಪಾಠ ಕಲಿಸಲಿದ್ದಾರೆಂದು ಮತ್ತೊಮ್ಮೆ ಅಸಮಾಧಾನ ಹೊರಹಾಕಿದ್ದಾರೆ. ಆದರೆ, ವಿಜಯನಗರ ಜಿಲ್ಲೆಗಾಗಿ ಹೋರಾಟ ನಡೆಸಿದ್ದ ಸಚಿವ ಆನಂದ್ ಸಿಂಗ್ ಸಂಭ್ರಮಿಸಿದ್ದು ಮುಖ್ಯಮಂತ್ರಿಗಳಿಗೆ ಧನ್ಯವಾದ ಹೇಳಿದ್ದಾರೆ. ಈ ನಡುವೆ ತಾತ್ವಿಕ ಒಪ್ಪಿಗೆ ಕೂಡಲೇ ಹಿಂಪಡೆಯುವಂತೆ ಒತ್ತಾಯಿಸಿ ಜನಸೈನ್ಯ ಸಂಘಟನೆ ಸಂಸ್ಥಾಪಕ ಅಧ್ಯಕ್ಷ ಕೆ. ಎರ್ರಿಸ್ವಾಮಿ ಸಾಮಾಜಿಕ ಜಾಲ ತಾಣದಲ್ಲಿ ವಿಡಿಯೋ ಹರಿಬಿಟ್ಟಿದ್ದಾರೆ.

ಸಂಪುಟ ಸಭೆ ನಂತರ ಮಾತನಾಡಿದ ಸಂಸದೀಯ ವ್ಯವಹಾರಗಳ ಸಚಿವ ಮಾಧುಸ್ವಾಮಿ, ವಿಜಯನಗರ ಜಿಲ್ಲೆ ರಚನೆಗೆ ತಾತ್ವಿಕ ಒಪ್ಪಿಗೆ ನೀಡಲಾಗಿದೆ. ಹೊಸ ಜಿಲ್ಲೆಗೆ ಯಾವ್ಯಾವ ತಾಲೂಕುಗಳು ಸೇರಲಿವೆ ಮತ್ತಿತರ ವಿಚಾರಗಳು ಇನ್ನಷ್ಟೇ ತೀರ್ಮಾನವಾಗಬೇಕಾಗಿದೆ ಎಂದು ತಿಳಿಸಿದರು.

**ಒಂದೂವರೆ ದಶಕದ ಹಿನ್ನೆಲೆ:** ವಿಜಯನಗರ ಜಿಲ್ಲೆ ರಚನೆಗೆ ಕಳೆದ ಒಂದೂವರೆ ದಶಕದಿಂದ ಹೋರಾಟ ನಡೆಯುತ್ತಿದೆ. 2007ರಲ್ಲಿ ಹೊಸಪೇಟೆಯನ್ನು ಕೇಂದ್ರವಾಗಿಸಿಕೊಂಡು ಪಶ್ಚಿಮ ತಾಲೂಕುಗಳನ್ನು ಸೇರಿಸಿ ವಿಜಯನಗರ ಜಿಲ್ಲೆ ರಚಿಸಬೇಕೆಂಬ ಕೂಗು, ಹೋರಾಟಗಳು ಆರಂಭವಾದವು.

▶ 10ನೇ ಪುಟಕ್ಕೆ

**ವಿಜಯನಗರ ಜಿಲ್ಲೆ ತಾಲೂಕುಗಳು**

- ಹೊಸಪೇಟೆ (ಕೇಂದ್ರ ಸ್ಥಾನ)
- ಕಂಪ್ಲಿ
- ಹಗರಿಬೊಮ್ಮನಹಳ್ಳಿ
- ಕೊಟ್ಟೂರು
- ಹೂವಿನಹಡಗಲಿ
- ಹರಪನಹಳ್ಳಿ



**ಬಳ್ಳಾರಿ ಜಿಲ್ಲೆ ತಾಲೂಕುಗಳು**

- ಬಳ್ಳಾರಿ (ಕೇಂದ್ರ ಸ್ಥಾನ)
- ಸಂಡೂರು
- ಸಿರುಗುಪ್ಪ
- ಕೂಡ್ಲಿಗಿ
- ಕುರುಗೋಡು

### ಮೀಸಲಾತಿ ಹೆಚ್ಚಳಕ್ಕಾಗಿ ಸಂಪುಟ ಉಪ ಸಮಿತಿ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮೀಸಲಾತಿ ಪ್ರಮಾಣ ಹೆಚ್ಚಳ ಕೂಗಿಗೆ ರಾಜ್ಯ ಸರ್ಕಾರ ಸ್ಪಂದಿಸಿದೆ. ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಿಸಬೇಕು ಎಂಬ ಈ ಪಂಗಡದವರ ಬೇಡಿಕೆ ಪರಿಶೀಲಿಸಿ ವರದಿ ನೀಡುವ ಸಲುವಾಗಿ ಸಂಪುಟ ಉಪ ಸಮಿತಿ ರಚನೆಗೆ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗಿದೆ. ಉಪ ಸಮಿತಿಗೆ ಸದಸ್ಯರ ಆಯ್ಕೆ ಅಧಿಕಾರವನ್ನು ಮುಖ್ಯಮಂತ್ರಿಗಳಿಗೇ ನೀಡಲಾಗಿದೆ.

ಬಳ್ಳಾರಿ ಜಿಲ್ಲೆಯ ಪಶ್ಚಿಮ ತಾಲೂಕುಗಳ ಹೋರಾಟಗಾರರ ಕನಸು ನನಸಾಗಿದೆ. ಹೊಸ ಜಿಲ್ಲೆ ರಚನೆಗೆ ತೀರ್ಮಾನ ಕೈಗೊಂಡ ಮುಖ್ಯಮಂತ್ರಿ ಹಾಗೂ ಸಂಪುಟದ ಎಲ್ಲ ಸದಸ್ಯರಿಗೆ ತುಂಬು ಹೃದಯದ ಕೃತಜ್ಞತೆ ಸಲ್ಲಿಸುತ್ತೇನೆ.



• **ಆನಂದ್‌ಸಿಂಗ್**, ಜಿಲ್ಲಾ ಉಸ್ತುವಾರಿ ಸಚಿವ



ಜಿಲ್ಲೆಯ ಜನರೇ ಮುಂದಿನ ದಿನಗಳಲ್ಲಿ ನಮ್ಮ ಪಕ್ಷಕ್ಕೆ ತಕ್ಕ ಪಾಠ ಕಲಿಸಲಿದ್ದಾರೆ. ಜಿಲ್ಲೆ ವಿಭಜನೆ ವಿರೋಧಿಸಿ ಜನ ಹೋರಾಟ ನಡೆಸಿದರೆ ಬೆಂಬಲ ನೀಡುತ್ತೇನೆ. ಕೊಪ್ಪಳ, ಯಾದಗಿರಿ ಎಷ್ಟರ ಮಟ್ಟಿಗೆ ಅಭಿವೃದ್ಧಿಯಾಗಿವೆ ಎನ್ನುವುದು ಕಣ್ಣ ಮುಂದಿದೆ.

• **ಸೋಮಶೇಖರ ರೆಡ್ಡಿ**, ಬಿಜೆಪಿ ಶಾಸಕ

ವಿಜಯ ಉದಯ

# ಕಲ್ಯಾಣ ಕರ್ನಾಟಕದ 7ನೇ ಜಿಲ್ಲೆ

**ಕಲ್ಯಾಣ ಕರ್ನಾಟಕಕ್ಕೆ ಮತ್ತೊಂದು ಜಿಲ್ಲೆ ಸೇರ್ಪಡೆಯಾಗಲಿದೆ. ಕಲಬುರಗಿ, ಬೀದರ್, ರಾಯಚೂರು, ಯಾದಗಿರಿ, ಕೊಪ್ಪಳ, ಬಳ್ಳಾರಿ ಜಿಲ್ಲೆಗಳ ಜತೆಗೆ ವಿಜಯನಗರ 7ನೇ ಜಿಲ್ಲೆಯಾಗಿ ರೂಪುಗೊಳ್ಳಲಿದೆ.**

**1ನೇ ಪುಟದಿಂದ** ▶ ವಿಜಯನಗರ ಜಿಲ್ಲಾ ಹೋರಾಟ ಸಮಿತಿ ರಚಿಸಿಕೊಂಡಿದ್ದ ಆ ಭಾಗದ ಜನರು 2007ರಲ್ಲಿ ಸತತ 3 ತಿಂಗಳು ಹೋರಾಟ ನಡೆಸಿದ್ದರು. ಆಗ ಸರ್ಕಾರದಿಂದ ಹೋರಾಟಕ್ಕೆ ಮನ್ನಣೆ ದೊರೆಯದೆ ಹೋರಾಟ ಕೈ ಬಿಡಲಾಗಿತ್ತು. ಮನವಿ ಸಲ್ಲಿಸುವುದಕ್ಕಷ್ಟೇ ಹೋರಾಟ ಸೀಮಿತವಾಯಿತು.

**ಬಲ ನೀಡಿದ ಆನಂದಸಿಂಗ್:** ವಿಜಯನಗರ ಜಿಲ್ಲೆ ರಚನೆ ಕೂಗಿಗೆ ಮತ್ತೆ ಬಲ ಬಂದಿದ್ದು 2019ರಲ್ಲಿ. 2018ರಲ್ಲಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿ ಶಾಸಕರಾಗಿದ್ದ ಆನಂದ್‌ಸಿಂಗ್ ಜಿಂದಾಲ್‌ಗೆ ಜಮೀನು ಪರಭಾರೆ, ವಿಜಯನಗರ ಜಿಲ್ಲೆ ರಚನೆ ಬೇಡಿಕೆ ಮುಂದಿಟ್ಟು ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು. ಪುನಃ ಬಿಜೆಪಿಗೆ ಸೇರ್ಪಡೆಗೊಂಡ ಆನಂದ್‌ಸಿಂಗ್ ಉಪ ಚುನಾವಣೆಯಲ್ಲಿ ಸ್ಪರ್ಧಿಸಿ ಪ್ರಚಾರದ ವೇಳೆ ವಿಜಯನಗರ ಜಿಲ್ಲೆ ಮಾಡುವುದೇ ನನ್ನ ಗುರಿ ಎಂದು ಘೋಷಿಸಿದ್ದರು. ಇವರ ಮನವಿಗೆ ಸ್ಪಂದಿಸಿದ್ದ ಸಿಎಂ ಯಡಿಯೂರಪ್ಪ ವಿಜಯನಗರ ಜಿಲ್ಲೆ ರಚನೆಗೆ ಅಗತ್ಯ ಮಾಹಿತಿ ಸಂಗ್ರಹಿಸಿ ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದರು.

ಜಿಲ್ಲೆಯನ್ನು ವಿಭಜಿಸಿ ಎರಡು ಜಿಲ್ಲೆಗಳ ನಕ್ಷೆ ಸಿದ್ಧಪಡಿಸಿ ಜಿಲ್ಲಾಡಳಿತ ಸರ್ಕಾರಕ್ಕೆ ಸಲ್ಲಿಸಿತ್ತು.

ಆದರೆ ಆಗ ಬಳ್ಳಾರಿ ನಗರ ಶಾಸಕ ಜಿ.ಸೋಮಶೇಖರ ರೆಡ್ಡಿ ಸೇರಿ ಹಲವು ಸಂಘಟನೆಗಳು ಜಿಲ್ಲೆ ರಚನೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ್ದರಿಂದ ತಾತ್ಕಾಲಿಕವಾಗಿ ನನೆಗುದಿಗೆ ಬಿದ್ದಿತ್ತು. ಉಪಚುನಾವಣೆಯಲ್ಲಿ ಗೆಲ್ಲುವ ಮೂಲಕ ಹ್ಯಾಟ್ರಿಕ್ ಸಾಧಿಸಿದ ಆನಂದ್‌ಸಿಂಗ್ ಜಿಲ್ಲಾ ಉಸ್ತುವಾರಿ ಸಚಿವರಾದ ಬಳಿಕವೂ, ವಿಜಯನಗರ ಜಿಲ್ಲೆ ಮಾಡುವುದೇ ನನ್ನ ಮೊದಲ ಆದ್ಯತೆ. ಅದನ್ನು ಮಾಡಿಯೇ ತೀರುತ್ತೇನೆ ಎಂದು ಹಲವು ಬಾರಿ ಹೇಳಿದ್ದರು. ಇದೀಗ ಬುಧವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ತಾತ್ವಿಕ ಒಪ್ಪಿಗೆ ಲಭಿಸಿದ್ದು ಅಧಿಕೃತ ಘೋಷಣೆಯಷ್ಟೇ ಬಾಕಿ ಉಳಿದಿದೆ.

**ವಿಭಜನೆ ಪೂರಕ ವರದಿ:** ಬಳ್ಳಾರಿ ಜಿಲ್ಲಾ

> **ವಿಜಯನಗರ ಜಿಲ್ಲೆ ಘೋಷಣೆ ಎಂದೋ ಆಗಬೇಕಿದ್ದು, ತಡವಾಗಿಯಾದರೂ ಇದಕ್ಕೆ ತಾತ್ವಿಕ ಒಪ್ಪಿಗೆ ಸಿಕ್ಕಿರುವುದು ಸ್ವಾಗತಾರ್ಹ.**
>
> **ವೈ. ಯಮುನೇಶ್**, ವಿಜಯನಗರ ಜಿಲ್ಲೆ ರಚನೆ ಸಮಿತಿ ಸದಸ್ಯ

ಕೇಂದ್ರದಿಂದ ಪಶ್ಚಿಮ ತಾಲೂಕುಗಳಾದ ಹರಪನಹಳ್ಳಿ, ಹಡಗಲಿ 200 ಕಿಮೀ ದೂರದಲ್ಲಿವೆ. ಕೊಟ್ಟೂರು, ಹಗರಿಬೊಮ್ಮನಹಳ್ಳಿ ತಾಲೂಕುಗಳಿಗೂ ಜಿಲ್ಲಾ ಕೇಂದ್ರ ದೂರವಾಗಲಿದೆ. ಇದು ಆಡಳಿತಾತ್ಮಕವಾಗಿ ಅನಾನುಕೂಲವಾಗಲಿದೆ. ಪ್ರಾದೇಶಿಕ ಅಸಮಾನತೆ ಸೃಷ್ಟಿಯಾಗಿದ್ದು ಜಿಲ್ಲೆ ವಿಭಜನೆಗೆ ಸೂಕ್ತವಾಗಿತ್ತು. ಬಳ್ಳಾರಿ ಜಿಲ್ಲಾಧಿಕಾರಿಗಳು ಸಹ ಜಿಲ್ಲೆ ವಿಭಜನೆಗೆ ಪೂರಕ ವರದಿ ನೀಡಿದ್ದಾರೆ. ವಿಜಯನಗರವು ಭೌಗೋಳಿಕವಾಗಿಯೂ ಜಿಲ್ಲೆಯ ಅರ್ಹತೆಗಳನ್ನು ಹೊಂದಿದೆ. ರೈಲ್ವೆ ಸೌಲಭ್ಯವಿದೆ. ಐತಿಹಾಸಿಕ ಹಿನ್ನೆಲೆಯುಳ್ಳ ಹಂಪಿ ಸ್ಮಾರಕಗಳು ಇದ್ದು ಪ್ರತ್ಯೇಕ ಜಿಲ್ಲೆಯಾದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯಾಗಲಿದೆ ಎಂಬ ಪೂರಕ ಅಂಶಗಳು ವರದಿಯಲ್ಲಿವೆ ಎನ್ನಲಾಗಿದೆ.